ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ ರವರ ನ್ಯಾಯಾಲಯ,

ಕೊಳ್ಳೇಗಾಲ

ಸಿ ಸಿ ಸಂಖ್ಯೆ 742/2018

ಚಾಸಾ 8 ಫ್ರಾಸಾ 5

| | | |
|---|---|---|
| ಸಾಕ್ಷಿಯ ಹೆಸರು | : | ಟಿ . ರಾಮೇಗೌಡ |
| ತಂದೆಯ ಹೆಸರು | : | ಬಿನ್ ಲೇಟ್ ತಿಮ್ಮಯ್ಯ |
| ವಯಸ್ಸು | : | 65 ವರ್ಷ |
| ಉದ್ಯೋಗ | : | ನಿವೃತ್ತ ಅಬಕಾರಿ ಉಪ-ನಿರೀಕ್ಷಕರು |
| ವಾಸ ಸ್ಥಳ | : | ತುರುವೇಕೆರೆ , ತುಮಕೂರು ಜಿಲ್ಲೆ. |

ದಿನಾಂಕ 23.06.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ದಿಃ05.04.2018 ರಿಂದ 23.11.2018ರ ವರೆಗೆ ಕೊಳ್ಳೇಗಾಲ ವಲಯ ಕಛೇರಿಯಲ್ಲಿ ಅಬಕಾರಿ ಉಪ-ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ12.06.2018 ರಂದು ಚಾಸಾ-1 ರವರಿಂದ ಕಡತ ಮತ್ತು ಮು.ಮಾನ್ನು ಸ್ವೀಕರಿಸಿ ತನಿಖೆ ಮುಂದುವರೆಸಿ ದಿಃ31.10.2018 ರಂದು ವಾಹನ ಸಂಖ್ಯೆ ಕೆಎ-10 ಕೆ -6634 ವಾಹನದ ಬಿ ಎಕ್ಸ್ಟ್ರಾಕ್ಟ್ ವರದಿಯನ್ನು ಸ್ವೀಕರಿಸಿರುತ್ತೇನೆ. ದಿಃ01.09.2018 ರಂದು ರಾಸಾಯನಿಕ ವಿಶ್ಲೇಷಣ ವರದಿಯನ್ನು ಸ್ವೀಕರಿಸಿರುತ್ತೇನೆ. ದಿಃ 22.09.2018 ರಂದು ವಾಹನದ ಮಾಲೀಕರ ವಿಳಾಸದ ವಿವರ ಕೋರಿ ಚಾಸಾ-07 ರವರಿಗೆ ಪತ್ರ ಬರೆದಿರುತ್ತೇನೆ. ದಿಃ 09.10.2018 ರಂದು ವಾಹನದ ಮಾಲೀಕರಾದ ರವಿ ಬಿನ್ ಪೆರುಮಾಳ್ ರವರು ದೊಮ್ಮನಗದ್ದೆ ಗ್ರಾಮದಲ್ಲಿ ವಾಸವಿರುವ ಬಗ್ಗೆ ಚಾಸಾ-7 ರವರು ವರದಿ ನೀಡಿರುತ್ತಾರೆ. ದಿಃ10.10.2018 ರಂದು ಚಾಸಾ-2 ರಿಂದ ಚಾಸಾ-5 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿಃ16.10.2018ರಂದು ಆರೋಪಿಯ ವಿರುದ್ಧ ಆರೋಪಿ ಸಾಬೀತಾದ ಕಾರಣ ಅಂತಿಮ ವರದಿಯ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

ಸಾಕ್ಷಿಯು ರಾಸಾಯನಿಕ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-9 ಎಂದು ಗುರುತಿಸಲಾಯಿತು.

ಸಾಕ್ಷಿಯು ಬಿ ಎಕ್ಸ್ಟ್ರಾಕ್ಟ್ ನ್ನು ಕೋರಿ ಬರೆದಿರುವ ಪತ್ರ ಹಾಗೂ ಬಿ.ಎಕ್ಸ್ಟ್ರಾಟ್ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-10 ಮತ್ತು 11 ಎಂದು ಗುರುತಿಸಲಾಯಿತು.

ಸಾಕ್ಷಿಯು ಚಾಸಾ-7 ರವರಿಗೆ ಬರೆದಿರುವ ಪತ್ರ ಮತ್ತು ಚಾಸಾ-7 ರವರು ಹಾಜರುಪಡಿಸಿದ ವರದಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-12 ಮತ್ತು 13 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಂ.ಎನ್. ವಕೀಲರಿಂದಃ**

ಅಮಾನತ್ತು ಪಡಿಸಿಕೊಂಡ ದ್ವಿಚಕ್ರ ವಾಹನ ಯಾರ ಹೆಸರಿನಲ್ಲಿ ಇರುತ್ತದೆ ಎಂದು ತಿಳಿದುಬಂದಿಲ್ಲ. ನಾನು ಚಾಸಾ-2 ರಿಂದ 5 ರವರ ಹೇಳಿಕೆಗಳನ್ನು ನಮ್ಮ ಅನುಕೂಲಕ್ಕೆ ತಕ್ಕಂತೆ ದಾಖಲಿಸಿಕೊಂಡಿರುತ್ತೇನೇ ಎಂದರೆ ಸರಿಯಲ್ಲ. ನಾನು ಯಾವುದೇ ತನಿಖೆ ನಡೆಸದೆ ಆರೋಪಿಯ ವಿರುದ್ಧ ಸುಳ್ಳು ದೋಷರೋಪಣೆ ಪಟ್ಟಿಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ-ಇಲ್ಲ**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

(ಎಂ. ರಂಜಿತ್ ಕುಮಾರ್)
ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಕೊಳ್ಳೇಗಾಲ.